ಒ. ಎಸ್. ನಂ. 321/2014

ಪಿಡಬ್ಲೂ-1

ದಿನಾಂಕಃ 02.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲು :- ಶ್ರೀ. ಪ್ರತಿವಾದಿ ಪರ ವಕೀಲರಿಂದಃ-**

ನನ್ನ ತಂದೆಗೆ 5 ಜನ ಮಕ್ಕಳು. ಪ್ರತಿವಾದಿಗಳು ತೊಂದರೆ ಕೊಡುತ್ತಿದ್ದರು ಎಂದು ದಾವೆ ಹೂಡಿರುತ್ತೇನೆ. ದಾವಾ ಸ್ವತ್ತು ನನಗೆ ಹೇಗೆ ಬಂತು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತಿನ ಮೇಲೆ ಈ ಹಿಂದೆ ಅಡ ಇಟ್ಟು ಹಣ ಪಡೆದಿರುತ್ತೇನೆ. ಸರ್ವೆ ನಂಬರ್ 5 ಮೇಲೆ ಬ್ಯಾಂಕಿನಿಂದ ಸಾಲ ಪಡೆದಿರುತ್ತೇನೆ. ನಾನು ಸಾಲ ಪಡೆಯುವ ಸಮಯದಲ್ಲಿ ದಾವಾ ಸ್ವತ್ತಿನ ಚಕ್ಕುಬಂಧಿ ಪೂರ್ವ ಪಶ್ಚಿಮ ಮತ್ತು ದಕ್ಷಿಣಕ್ಕೆ ದಾರಿ ಮತ್ತು ಉತ್ತರಕ್ಕೆ ಸರ್ಕಾರಿ ಜಮೀನು ಎಂದು ತೋರಿಸಿರುತ್ತೇನೆ ಎಂದರೆ ನನ್ನ ತಾಯಿಗೆ ತಿಳುವಳಿಕೆ ಇಲ್ಲದೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಮುಂದುವರೆದು ನಾನು ಕೂಡ ಅದಕ್ಕೆ ಸಹಿ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬೆರಯಲು ಬರುತ್ತದೆ. ಇಂಗ್ಲೀಷ್ ನಲ್ಲಿ ಸಹಿ ಮಾಡುತ್ತೇನೆ. ಸಾಕ್ಷಿಗೆ ದಾವಾ ಸ್ವತ್ತಿನ ಚಕ್ಕುಬಂಧಿ ಪೂರ್ವಕ್ಕೆ ಮರಲಕ್ಕಿಗೌಡರ ಜಮೀನು,ಪಶ್ಚಿಮಕ್ಕೆ ಕಳಸೇಗೌಡನ ಬಸವೇಗೌಡ ಉತ್ತರಕೆ ರಸ್ತೆ ಮತ್ತು ದಕ್ಷಿಣಕ್ಕೆ ಸಿದ್ದರಾಜು ರವರ ಜಮೀನು ಎಂದು ಓದಿ ಹೇಳಲಾಗಿ ಸದರಿ ಚಕ್ಕುಬಂಧಿ ತಪ್ಪಾಗಿರುತ್ತದೆ ಎಂದು ನುಡಿಯುತ್ತಾರೆ. ಸರಿಯಾದ ಪೂರ್ವ ಕ್ಕೆ ಚಕ್ಕುಬಂಧಿ ರವೀಂದ್ರ ಬೋರೇಗೌಡ ಮರಲಕ್ಕಿಗೌಡ, ಪಶ್ಚಿಮಕ್ಕೆ ಬಸವೇಗೌಡ ಕಳಸೇಗೌಡ, ಉತ್ತರಕ್ಕೆ ಸಿದ್ದೇಗೌಡ ಸಿದ್ದರಾಜು, ದಕ್ಷಿಣಕ್ಕೆ ರಸ್ತೆ ಎಂದು ನುಡಿಯುತ್ತಾರೆ. ಸದರಿ ಚಕ್ಕುಬಂಧಿ ಯನ್ನು ತೋರಿಸುವ ಯಾವುದಾದರು ದಾಖಲೆಗಳನ್ನು ಹಾಜರು ಪಡಿಸಿದ್ದೀರಾ ಎಂದರೆ ಚಕ್ಕುಬಂಧಿ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ನಾನು ದಾವೆ ಬಾಕಿ ಇರುವಾಗ ದಾವಾ ಸ್ವತ್ತನ್ನು ರಮೇಶ ಎಂಬುವವರಿಗೆ ದಿನಾಂಕ 27.06.2018 ರಲ್ಲಿ ಕ್ರಯದ ಕರಾರು ಮಾಡಿರುತ್ತೇನೆ ಎಂದರೆ ಸರಿ.

ಸದರಿ ಕರಾರು ಪತ್ರದಲ್ಲಿ ಪೂರ್ವಕ್ಕೆ ಗೊಲ್ಲನಬೀಡು ಗ್ರಾಮದ ರವೀಂದ್ರ ಬಿನ್ ಬೋರೇಗೌಡ, ಪಶ್ಚಿಮಕ್ಕೆ ಬಸವೇಗೌಡ ಶಿಂಡೇನಹಳ್ಳಿ ಗ್ರಾಮದ ಬಸವೇಗೌಡ ಬಿನ್ ಕಳಸೇಗೌಡ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ

ಶಿಂಡೇನಹಳ್ಳಿ ಗ್ರಾಮದ ಮಂಜು ಬಿನ್ ರಾಮೇಗೌಡ ಎಂದು ನಮೂದಿಸಿದೆ ಎಂದರೆ ಉತ್ತರಕ್ಕೆ ಚಕ್ಕುಬಂಧಿ ತಪ್ಪಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಸದರಿ ಚಕ್ಕುಬಂಧಿ ಸ್ವತ್ತಿನಲ್ಲಿ ಸ್ವಾಧೀನ ಇಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗಾಗಿ ಪ್ರತಿವಾದಿ ಯಾವತ್ತು ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸರ್ವೆ ನಂಬರ್ 5 ಮತ್ತು 6 ರಲ್ಲಿ ಜಮೀನು ಇರುತ್ತದೆ ಎಂದರೆ 6 ರಲ್ಲಿ 2 ಎಕರೆ 29 ಗುಂಟೆ ಮಾತ್ರ ಇರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿ ಗಳ ಸ್ವತ್ತಿನ ಚಕ್ಕುಬಂಧಿ ಪೂರ್ವಕ್ಕೆ ಕಳಸೇಗೌಡ, ಪಶ್ಚಿಮಕ್ಕೆ ಸಿದ್ದೇಗೌಡ,ಉತ್ತರಕ್ಕೆಮರಲಕ್ಕಿಗೌಡ,ದಕ್ಷಿಣಕ್ಕೆ ದಾಸೆಗೌಡ ಎಂದರೆ ಎಂದರೆ ಸರಿಯಲ್ಲ. ಸದರಿ ಚಕ್ಕುಬಂಧಿ ಸ್ವತ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಪ್ರತಿವಾದಿ ಗಳ ತಾತನಿಗೆ ಸದರಿ ಸ್ವತ್ತು ಮಂಜೂರಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಯಾವಾಗ ತೊಂದರೆ ಕೊಟ್ಟಿರುತ್ತಾರೆ ಎಂದು ದಿನಾಂಕ ಗೊತ್ತಿಲ್ಲ. ದಾವಾ ಸ್ವತ್ತನ್ನು ನನ್ನ ತಂದೆ ಕಾಲದಿಂದಲೂ ವಾರ ಗುತ್ತಿಗೆ ಮಾಡುತ್ತಿದ್ದರಿಂದ ಬಂದಿರುತ್ತದೆ ಎಂದು ನುಡಿಯುತ್ತಾರೆ. ಬರವಣಿಗೆ ಆಗಿರಲಿಲ್ಲ. ನಾನು ದಾವಾ ಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಿರಲಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದೇನೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವೆ ಬಾಕಿ ಇರುವಾಗಲೇ ಸುಳ್ಳು ಚಕ್ಕಬಂಧಿ ನೀಡಿ ದಾವಾ ಸ್ವತ್ತನ್ನು ಮಾರಾಟ ಮಾಡಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 5 ಮತ್ತು 6 ರಲ್ಲಿ ಒಟ್ಟು 5 ಎಕರೆ ಜಮೀನು ಇದ್ದು 2 ಎಕರೆ 20 ಗುಂಟೆ ಜಮೀನಿನಲ್ಲಿ ಪ್ರತಿವಾದಿ 2 ರವರು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಸ್ವತ್ತಿನ ಚಕ್ಕುಬಂಧಿ ನೀಡಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ಸ್ವಾಧೀನಕ್ಕೆ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಮಲ್ಲೇನಹಳ್ಳಿ ಗ್ರಾಮ ಸರ್ವೆ ನಂಬರ್ 5/2 ರ ಮೇಲೆ ದಾವೆ ಸಲ್ಲಿಸಿರುತ್ತೇನೆ. ಶಿಂಡೇನಹಳ್ಳಿ ಗ್ರಾಮ ಎಂದು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಜವರಮ್ಮ ರವರಿಗೆ ಯಾವ ಖಾತೆ ಆಯಿತು ಎಂದು ದಾಖಲೆ ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತನ್ನು ಲಿಖಿತ ದಾಖಲೆ ಮೇಲೆ ನನ್ನ ತಾಯಿ

ಬರೆದುಕೊಟ್ಟಿರುವುದಿಲ್ಲ ವಿಭಾಗದ ಮೂಲಕ ಬಂದಿರುತ್ತದೆ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ